ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1265
ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 24-12-2021
ಉತ್ತರಿಸುವವರು : ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

	ಪ್ರಶ್ನೆಗಳು	ಉತ್ತರಗಳು
ಅ	ರಾಜ್ಯದಲ್ಲಿ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರಗಳನ್ನು ತೆರೆಯಲು ಇರುವ ನಿಯಮಗಳೇನು; ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಸದರಿ ಕೇಂದ್ರಗಳನ್ನು ಸ್ಥಾಪಿಸಲು ದೊರೆಯುತ್ತಿರುವ ನೆರವು, ಸಾಲ, ಸಹಾಯಧನ, ಪ್ರೋತ್ಸಾಹಧನ ಹಾಗೂ ಇತರೆ ಸೌಲಭ್ಯಗಳೇನು; (ಆದೇಶಗಳ ಪ್ರತಿ ನೀಡುವುದು)	ರಾಜ್ಯದಲ್ಲಿ ಖಾಸಗಿ ರೇಷ್ಮೆ ಚಾಕಿ ಸಾಕಾಣಿಕೆ ಕೇಂದ್ರ ತೆರೆಯಲು 1. ಫಲಾನುಭವಿಯು ಕೇಂದ್ರ ರೇಷ್ಮೆ ಮಂಡಳಿಯಲ್ಲಿ ನೊಂದಣಿ ಮಾಡಿಕೊಳ್ಳಬೇಕು. 2. ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರವನ್ನು ತೆರೆಯಲು ಇಚ್ಛಿಸುವ ಫಲಾನುಭವಿ ಮಾನ್ಯತೆ ಪಡೆದ ರಾಜ್ಯ/ಕೇಂದ್ರ ರೇಷ್ಮೆ ತರಬೇತಿ ಸಂಸ್ಥೆಯಲ್ಲಿ 3 ತಿಂಗಳು ಅವಧಿಗೆ ``ಚಾಕಿ ಸಾಕಾಣಿಕೆ" ಬಗ್ಗೆ ತರಬೇತಿಯನ್ನು ಪಡೆಯಬೇಕು. 3. ಫಲಾನುಭವಿಗೆ ಕನಿಷ್ಠ 2 ಎಕರೆ ಸ್ವಂತ ಅಥವಾ ಗುತ್ತಿಗೆ ಆಧಾರದ ಮೇಲೆ ಪಡೆದ ನೀರಾವರಿವುಳ್ಳ ಹಿಪ್ಪುನೇರಳೆ ಚಾಕಿ ತೋಟವಿದ್ದು ಹನಿ ನೀರಾವರಿ ಅಳವಡಿಸಿರಬೇಕು. ಸಾವಯವ ಗೊಬ್ಬರಗಳನ್ನು ಹೆಚ್ಚಾಗಿ ಬಳಸಬೇಕು. 4. 5000 ರೋಗ ರಹಿತ ಮೊಟ್ಟೆಗಳ ಚಾಕಿ ಕಟ್ಟುವುದಕ್ಕೆ (ಉ42 X ಅ30 X ಎ16) 1260 ಚದರಡಿ ಚಾಕಿ ಸಾಕಾಣಿಕಾ ಕಟ್ಟಡವನ್ನು ಚಾಕಿ ತೋಟದಲ್ಲಿಯೇ ನಿರ್ಮಿಸಿರಬೇಕು. 5. ವಾರ್ಷಿಕ 1.50 ರಿಂದ 1.60 ಲಕ್ಷ ದ್ವಿತಳಿ ಮೊಟ್ಟೆ ಚಾಕಿ ಕಟ್ಟುವ ಸಾಮರ್ಥ್ಯತೆಯಿರಬೇಕು. ಪ್ರತಿ ತಂಡಕ್ಕೆ 5 ಸಾವಿರ ಮೊಟ್ಟೆಗಳಂತೆ ವರ್ಷಕ್ಕೆ 32 ತಂಡಗಳಲ್ಲಿ ಚಾಕಿ ಮಾಡುವ ಸಾಮರ್ಥ್ಯ ಇರಬೇಕು. 6. ಚಾಕಿ ಸಾಕಾಣಿಕೆಗೆ ಅಗತ್ಯವಾದ ಎಲ್ಲಾ ಸಲಕರಣೆಗಳನ್ನು ಖರೀದಿಸಬೇಕು. ಕೇಂದ್ರ ರೇಷ್ಮೆ ಮಂಡಳಿಯ ಸಹಯೋಗದೊಂದಿಗೆ ರೇಷ್ಮೆ ಇಲಾಖೆಯು ಕೇಂದ್ರ ಪುರಸ್ಕೃತ "ಸಿಲ್ಕ್ ಸಮಗ್ರ" ಯೋಜನೆಯಡಿ ಹೊಸದಾಗಿ ಸ್ಥಾಪಿಸಿರುವ ನೋಂದಾಯಿತ ಖಾಸಗಿ ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳಿಗೆ ಹಿಪ್ಪುನೇರಳೆ ತೋಟ ಸ್ಥಾಪನೆ/ನಿರ್ವಹಣೆ, ಚಾಕಿ ಸಾಕಾಣಿಕಾ ಕಟ್ಟಡ ನಿರ್ಮಾಣ ಮತ್ತು ಚಾಕಿ ಸಾಕಾಣಿಕಾ ಸಲಕರಣೆ ಖರೀದಿಗೆ (ಮೂರು ಘಟಕಗಳು ಸೇರಿ) ಸಹಾಯಧನ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.